(b) 62 hand pumps were out of order in the month of November 1979. Out of which 54 hand pumps have been repaired. The statement showing the names of villages, the number of hand pumps repaired for which representations have been received requesting for the repairs of hand pumps are laid on the table * (vide satement 'C' and 'D')

ಶ್ರೀ ಕೆ. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಹೊಸದುರ್ಗ ತಾಲ್ಲೂಕಿನಲ್ಲಿ ರಿಗ್ ಬಾವಿಗಳು ಕೆಟ್ಟುಹೋಗಿ ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬೇಗಾನೆ ರಾಮಯ್ಯ.—ಮೊದಲು ಬಂದ ವರದಿ ಪ್ರಕಾರ, ೬೨ಕ್ಕೆ ಪಂಪುಗಳು ಕೆಟ್ಟು ಹೋಗಿದ್ದು ಅವುಗಳ ಪೈಕಿ ೫೪ ಕೈ ಪಂಪುಗಳನ್ನು ದುರಸ್ತಿ ಮಾಡಲಾಗಿದೆ ಎಂದು ತಿಳಿಸಿತ್ತು. ಕೆಟ್ಟು ಹೋಗಿರುವ ಕಡೆ ರಿಪೇರಿ ಮಾಡುತ್ತಿದ್ದು ಇತ್ತೀಚಿನ ವರದಿ ಪ್ರಕಾರ ೬೨ ಬಾವಿಗಳನ್ನು ರಿಪೇರಿ ಮಾಡಿಸಿದ್ದೇವೆ.

ಶ್ರೀ ಕೆ. ವೆಂಕಟರಾಮಯ್ಯ.—ಬಾಗೂರಿಗೆ ಕುಡಿಯುವನೀರಿನ ವ್ಯವಸ್ಥೆ ಮಾಡುವ ಕಾರ್ಯ ಯಾವಾಗ ಮುಗಿಯುತ್ತದೆ ?

ಶ್ರೀ ಬೇಗಾನೆ ರಾಮಯ್ಯ.—ಎನ್. ಆರ್. ಡಬ್ಲ್ಯೂ ಪ್, ಸ್ಕೀಂ ಬಗ್ಗೆ ಟೆಂಡರ್ ಕರೆದಾಗ ಯಾರೂ ಮುಂದೆ ಬರಲಿಲ್ಲ. ಆದ್ದರಿಂದ ಪೀಸ್ ವರ್ಕ್‌ನಲ್ಲಿ ಕೆಲಸ ಮಾಡಿಸುತ್ತಿದ್ದೇವೆ. ನವೆಂಬರ್ ಕೊನೇ ಹೊತ್ತಿಗೆ ಸಂಪೂರ್ಣವಾಗಿ ಕೆಲಸ ಮುಗಿಯುತ್ತದೆ.

Grants of Subsidy Loan to the Farmers

117. SRI K. H. HANUME GOWDA (Hassan).—Will the Minister for Rural Development and Panchaayat Raj be pleased to state —

(a) the names of the Districts in the State in which the developmental programmes pertaining to the Small and marginal Land holders are under implementation and since how many years;

(b) according to this scheme, the names of the district with the respective years for which subsidy has been given and the amount of subsidy alloted for each year;

(c) the amount spent out of the amount fixed for each such district for the last 3 years ;

(d) the reasons for not spending the entire amount of subsidy so fixed;

(e) The Central and State Government shares of the subsidy under this scheme;

(f) the amount required for maintenance of staff in connection with the implementation of this programme for one year, in each district;

---

* copies placed in the Karnataka Legislature Library *vide* No. 38 dated 16-7-80

(g) the number of Small and Marginal Land holders benefited under this programme in each District;

(h) the number of Small and Marginal Land holders who will be benefited by this programme ?

SRI B. RAMAIAH (Minister for Rural Development and Panchayat raj).—

(a) Reply furnished in Annexure I (laid on the table) *

(b) Reply furnished in Annexure II (laid on the table) *

(c) Answer given in Annexure III (laid on the table) *

(d) The full amount has not been spent because the Co-operative and Commercial Banks have not sanctioned the loans to the Small and marginal farmers and the Agricultural labourers.

(e) Upto 1978-79 the Central Government are to pay the full amount towards the schemes sponsored by the Government. But from this year onwards projects commenced with the assistance of Centra Government. State Government have to share 50 per cent of the cost. Expenditure pertaining to the schemes sponsored by the State Government in 11Districts has to be borne by the State Government itself.

(f) Till February 1979 Small Farmers Development Institutions and Drought Prone area schems were working separately. In 1979, these two institutions have been merged with the District Rural Development Institution and Districts R. D. Institutions have been established for each Distrcct. It is not possible to spent more than7½ per cent towards the establishment expenditure in respect of the schemes started with the Central Assistance. But the Distsict Rural Development Institutions (Boards) are looking after the work pertaining to the Small Farmers Development Institutions (Boards). Draught Prone Area Development Programmes and Integrated Rural Development Programmes. More than 7½ per cent of the amount is spent towards establishment since 7½ per cent of the amount is insufficient to meet the establishment expenditure.

(g) Reply furnished in Annexure 4.

(h) Reply furnished in Annexure 4.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ನನ್ನ 'ಈ' ಪ್ರಶ್ನೆಯಲ್ಲಿ ಚಿಕ್ಕ ಮತ್ತು ಅತಿ ಚಿಕ್ಕ ಹಿಡುವಳಿದಾರರ ಅಭಿವೃದ್ಧಿ ಯೋಜನೆಗೆ ನಿಗದಿಪಡಿಸಿದ್ದ ಪೂರ್ತಿ ಸಬ್ಸಿಡಿ ಹಣ ವಿಚ್ರ್ಗದಿರಲು ಕಾರಣ ವೇನು ಎಂದು ಕೇಳಿರುವುದಕ್ಕೆ ಸಹಕಾರಿ ಹಾಗೂ ವಾಣಿಜ್ಯ ಬ್ಯಾಂಕುಗಳು ನಿಗದಿಗೊಳಿಸಿದಂತೆ, ಸಣ್ಣ

* Copies placed in the Karnataka Legislature library vide No. 39 Dated 16-7-1980.

ಮತ್ತು ಅತಿ ಸಣ್ಣ ರೈತರಿಗೆ ಹಾಗೂ ಕೃಷಿ ಕಾರ್ಮಿಕರಿಗೆ ಸಾಲ ಮಂಜೂರು ಮಾಡದೇ ಇರುವುದರಿಂದ ಪೂರ್ತಿ ಹಣ ಖರ್ಚಾಗಿರುವುದಿಲ್ಲ ಎಂದು ತಿಳಿಸಿದ್ದೀರಿ. ಸ್ವಾಮಿ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹಾಗೂ ಕೃಷಿ ಕಾರ್ಮಿಕರಿಗೆ ಆರ್ಥಿಕವಾಗಿ ಸಹಾಯ ಮಾಡಿ ಅವರೂ ಬೇರೆ ಜನರ ತರಹ ಜೀವನ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಮಾಡಿರುವ ಸರ್ಕಾರದ ಯೋಜನೆಗೆ ಇದು ವಿರೋಧವಾಗಿಲ್ಲವೇ ? ಸರ್ಕಾರ ಈ ರೀತಿ ತನ್ನ ಅಸಹಾಯಕತೆಯನ್ನು ಏತಕ್ಕೆ ತೋರಿಸಿಕೊಂಡಿದೆ ?

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಸರ್ಕಾರ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿಲ್ಲ. ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಈ ದಿಸೆಯಲ್ಲಿ ಮಾಡಿದೆ. ಸಣ್ಣ ರೈತರಿಗೆ, ಅತಿ ಸಣ್ಣ ರೈತರಿಗೆ, ಕೃಷಿ ಕಾರ್ಮಿಕರಿಗೆ ಮತ್ತು ಕುಶಲಕರ್ಮಿಗಳಿಗೆ ಸಾಲ ಕೊಡಬೇಕೆಂಬ ದೃಷ್ಟಿಯಿಂದ ಅದಕ್ಕೆ ಎಸ್. ಎಫ್. ಡಿ. ಎ. ಮುಖಾಂತರ ಪ್ರಯತ್ನ ಮಾಡುತ್ತಿದ್ದೇವೆ. ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು ಸಕಾಲದಲ್ಲಿ ಸಾಲವನ್ನು ಗುರುತಿಸಿ ಕೊಡುವುದ ಕ್ಕಾಗಿಲ್ಲ. ಇದರಿಂದ ಸಬ್ಸಿಡಿ ಹಣ ತಲುಪುವುದಕ್ಕೆ ಅಡ್ಡಿಯಾಗಿದೆ. ಬರುವ ೧೯೮೦-೮೧ರ ಹೊತ್ತಿಗೆ ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳನ್ನು ಸಮನ್ವಯಗೊಳಿಸಿ ಯಾರಿಗೂ ತೊಂದರೆ ಆಗದ ರೀತಿಯಲ್ಲಿ ಸಬ್ಸಿಡಿ ಕೊಡಿಸಬೇಕೆಂಬ ಯೋಚನೆ ನಮಗಿದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಕೇಂದ್ರ ಸರ್ಕಾರ ಸಬ್ಸಿಡಿ ಹಣವನ್ನು ಪೂರ್ತಿ ಕೊಟ್ಟಿದೆ. ಮೊದಲು ೮ ಜಿಲ್ಲೆಗಳಿಗೆ ಪೂರ್ತಿ ಸಬ್ಸಿಡಿ ಹಣ ಕೊಟ್ಟಿದೆ ಕೊಟ್ಟಿರತಕ್ಕ ಸಬ್ಸಿಡಿ ಹಣದಲ್ಲಿ ನಾಲ್ಕೈದು ವರ್ಷದಿಂದ ಯಾವ ಜಿಲ್ಲೆಯಲ್ಲೂ ಶೇಕಡ ೫೦ಕ್ಕಿಂತ ಹೆಚ್ಚು ಖರ್ಚು ಆಗಿಲ್ಲ ಕಳೆದ ೫ ವರ್ಷಗಳಿಂದಲೂ ಕೇವಲ ೩೦ ಪರ್ಸೆಂಟ್, ೪೦ ಪರ್ಸೆಂಟ್ ಮಾತ್ರ ಖರ್ಚಾಗಿದೆ. ಇದು ಸರ್ಕಾರದ ಗಮನಕ್ಕೆ ಏತಕ್ಕೆ ಬರಲಿಲ್ಲ ? ನೀವು ವಾಣಿಜ್ಯ ಬ್ಯಾಂಕುಗಳ ಮತ್ತು ಸಹಕಾರಿ ಬ್ಯಾಂಕುಗಳ ಮೇಲೆ ಕಾರಣ ತೋರಿಸುತ್ತೀರಿ. ಬಡವರಿಗೆ, ದೀನದಲಿತರಿಗೆ ಅನುಕೂಲವಾಗತಕ್ಕ ಯೋಜನೆಯನ್ನು ಹಾಕಿ ಈ ರೀತಿ ಮಾಡಿದರೆ ಏನು ಪ್ರಯೋಜನ ? ಹಣ ಖರ್ಚಾಗದೇ ಹೋದರೆ ಅದಕ್ಕಿಟ್ಟಿದ್ದ ಹಣ ಸದ್ವಿನಿಯೋಗವಾಗುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸರ್ಕಾರ ಸೂಕ್ತ ಕ್ರಮ ತೆಗೆದುಕೊಂಡು ಸಬ್ಸಿಡಿ ಹಣ ಖರ್ಚು ಮಾಡುವುದಕ್ಕೆ ಏತಕ್ಕೆ ಪ್ರಯತ್ನ ಮಾಡಲಿಲ್ಲ ? ಕಳೆದ ೫ ವರ್ಷಗಳಿಂದ ಈ ಯೋಜನೆಯಲ್ಲಿ ಕೇವಲ ೩೦ ಪರ್ಸೆಂಟ್ ಹಣ ಖರ್ಚಾಗಿದೆ. ಇದರ ಬಗ್ಗೆ ಏತಕ್ಕೆ ಗಮನ ಕೊಟ್ಟಿಲ್ಲ ? ಇದು ಹೊಸ ಯೋಜನೆ ಯಾದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೆ ಇದು ಹಾಗಿಲ್ಲ. ಸರ್ಕಾರ ಬಿಗಿಯಾದ ಕ್ರಮ ತೆಗೆದು ಕೊಂಡಿಲ್ಲ ಎಂದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಬಂದು ಬೇಳೆ ವಾಣಿಜ್ಯ ಬ್ಯಾಂಕುಗಳು ಸರಿ ಯಾಗಿ ಕೆಲಸ ಮಾಡದಿದ್ದರೆ, ಸರಯಾಗಿ ಅಸಕ್ತಿ ವಹಿಸದಿದ್ದರೆ ಕೇಂದ್ರ ಸರ್ಕಾರಕ್ಕೆ ಬರೆದು ಈ ರೀತಿ ಇವರಿಂದ ತೊಂದರೆಯಾಗುತ್ತಿದೆ ಎಂದು ಹೇಳಿ ಅವರಿಂದ ಬ್ಯಾಂಕುಗಳವರಿಗೆ ನಿರ್ದೇಶನ ಕೊಡಿಸಬಹು ದಾಗಿತ್ತು. ಸಹಕಾರಿ ಬ್ಯಾಂಕುಗಳು ನಿಮ್ಮ ಕೈಯಲ್ಲೇ ಇವೆ. ಅವುಗಳಿಗೆ ಏತಕ್ಕೆ ಆದೇಶವನ್ನು ಕೊಡಲಿಲ್ಲ ?

ಶ್ರೀ ಬೇಗಾನೆ ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಕಳೆದ ೫ ವರ್ಷಗಳಿಂದ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಡಿ. ಐ. ಆರ್. ಲೋನ್ ಸಕಾಲದಲ್ಲಿ ಮರುಪಾವತಿ ಮಾಡಲಿಲ್ಲ ಎಂದು ಸಣ್ಣ ರೈತರಿಗೆ ಸಾಲ ಕೊಡುವುದಕ್ಕೆ ಬ್ಯಾಂಕುಗಳು ಅಡ್ಡಿಪಡಿಸಿದವು. ಅನೇಕ ದಿವಸಗಳು ಬ್ಯಾಂಕುಗಳ ಸಾಲ ಸ್ಥಗಿತವಾಗಿತ್ತು. ಈಗ ನಮ್ಮ ಸರ್ಕಾರ ಬಂದನಂತರ ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಬರುವ ೧೯೮೦-೮೧ರ ಹೊತ್ತಿಗೆ ವಾಣಿಜ್ಯ ಬ್ಯಾಂಕುಗಳನ್ನು ಮತ್ತು ಸಹಕಾರಿ ಬ್ಯಾಂಕುಗಳನ್ನು ಸಮನ್ವಯಗೊಳಿಸಿ ಸಾಲ ವಿತರಣೆ ಆಗುವಂತೆ ವ್ಯವಸ್ಥೆ ಮಾಡುವ ಆಲೋಚನೆ ಇದೆ.

ಶ್ರೀ ಕೆ. ಹೆಚ್. ಹನುಮೇ ಗೌಡ. –ಈ ಯೋಜನೆ ಪ್ರಾರಂಭವಾಗಿ ೫ ವರ್ಷವಾಗಿದೆ. ಈಗ ಈ ಯೋಜನೆ ಪ್ರಕಾರ ರೈತರಿಗೆ, ಸಣ್ಣ ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಕೇವಲ ೩೦ ಪರ್ಸೆಂಟ್ ಹಣ ಖರ್ಚಾಗಿದೆ. ಆ ಯೋಜನೆಯ ಅವಧಿ ೫ ವರ್ಷಗಳು ಎಂದು ಕೇಳಿದ್ದೇನೆ. ಆ ಪ್ರಕಾರ ಇಲ್ಲಿಗೆ ಮುಗಿದು ಹೋಗುತ್ತದೆ. ಆದರೆ ಎಲ್ಲರಿಗೂ ಇದರ ಪ್ರಯೋಜನ ದೊರಕಿಲ್ಲ. ಆದ್ದರಿಂದ ಎಲ್ಲರಿಗೂ ಅನುಕೂಲ ಸಿಗುವವರೆಗಾದರೂ ಈ ಯೋಜನೆಯನ್ನು ಮುಂದುವರಿಸುತ್ತೀರಾ ? ಅಥವಾ ೫ ವರ್ಷವಾಗಿ ಹೋಗಿರುವುದರಿಂದ ಮುಗಿದು ಹೋಯಿತು ಎಂದು ಸುಮ್ಮನೆ ಇದ್ದು ಬಿಡುತ್ತೀರಾ ? ಸಿಕ್ಕಿದವರಿಗೆ ಸಿಗಲಿ ಸಿಗದಿರುವವರು ಆಕಾಶದ ಕಡೆ ನೋಡಿ ಎಂದು ಆಕಾಶ ತೋರಿಸಿಬಿಡುತ್ತೀರಾ ?

ಶ್ರೀ ಬೇಗಾನೆ ರಾಮಯ್ಯ.—ಪರಿಸ್ಥಿತಿಯನ್ನು ನೋಡಿ ಇದನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ.-ರೈತರಿಗೆ ಅನುಕೂಲವಾಗತಕ್ಕ ಅನೇಕ ಯೋಜನೆಗಳನ್ನು ಸರ್ಕಾರ ದವರು ಮಾಡಿದ್ದಾರೆ. ಲಕ್ಷಾಂತರ ರೂಪಾಯಿ ಸಬ್ಸಿಡಿ ಹಣ ಇದಕ್ಕಾಗಿ ಖರ್ಚಾಗುತ್ತಿದೆ. ರೈತರಿಗೆ ಸಣ್ಣ ಹಿಡುವಳಿದಾರರಿಗೆ, ಕುಶಲಕರ್ಮಿಗಳಿಗೆ ಸರಿಯಾದ ವೇಳೆಯಲ್ಲಿ ಸಾಲ ಸಿಗುವುದಿಲ್ಲ. ನಿಮ್ಮ ಯೋಜನೆಗೆ ಅನುಗುಣವಾಗಿ ಸಹಕಾರ ಕೊಡುವಂತೆ ಬ್ಯಾಂಕುಗಳ ಮೇಲೆ ಹತೋಟಿ ಇಟ್ಟುಕೊಳ್ಳುವು ದಕ್ಕಾಗುವುದಿಲ್ಲವೇ ?

ಶ್ರೀ ಬೇಗಾನೆ ರಾಮಯ್ಯ.—ಬ್ಯಾಂಕುಗಳವರ ಸಹಕಾರವನ್ನು ನಾವು ಸದಾ ಯಾಚನೆ ಮಾಡುತ್ತಿದ್ದೇವೆ. ನಾವು ಅವರ ಸಹಕಾರವನ್ನು ಕೇಳಿದ್ದೇವೆ. ಬಹುಶಃ ಅವರು ನಮಗೆ ಸಹಕಾರ ಕೊಡಬಹುದು. ಅವರೂ ಮುಂದೆ ಬರುತ್ತಿದ್ದಾರೆ.

ಶ್ರೀ ಕೆ. ಹೆಚ್. ಹನುಮೇ ಗೌಡ.—ಯಾರು ಯಾರು ಅಲ್ಪಾವಧಿ ಸಾಲ ತೆಗೆದುಕೊಂಡಿದ್ದಾರೋ ಅದಕ್ಕೆ ಈ ಸಬ್ಸಿಡಿ ಹಣ ಅಡ್ಜಸ್ಟ್ ಮಾಡಿದ್ದಾರೆ ಅದಕ್ಕೆ ಖರ್ಚಾಗಿದೆ ಈ ಯೋಜನೆ ಪ್ರಕಾರ ಕುರಿ ಕೊಳ್ಳುವುದಕ್ಕೆ ಡೈರಿ ಫಾರಂ ಮಾಡುವುದಕ್ಕೆ ಮತ್ತು ಸಾಮೂಹಿಕ ನೀರಾವರಿ ಭಾವಿಗಳನ್ನು ಮಾಡುವು ದಕ್ಕೆ ಮುಂತಾದ ಉಪಯುಕ್ತವಾದ ಪ್ರಾಜೆಕ್ಟ್‌ಗಳಿಗೆ ಹೆಚ್ಚು ಹಣ ಖರ್ಚಾಗಿಲ್ಲ. ಯಾರು ಯಾರು ಎಲ್ಲೆಲ್ಲಿ ಅಲ್ಪಾವಧಿ ಸಾಲ ತೆಗೆದುಕೊಂಡಿದ್ದಾರೋ ಅದಕ್ಕೆ ಸಬ್ಸಿಡಿ ಕೊಟ್ಟು ಕೈ ಮುಗಿದಿದ್ದಾರೆ. ರೈತರಿಗೆ ಸಿಗಬೇಕಾದ ಪ್ರಯೋಜನ ಸರಿಯಾಗಿ ಸಿಕ್ಕಿಲ್ಲ. ಸಾಮೂಹಿಕ ನೀರಾವರಿ ಯೋಜನೆ ಬಹಳ ಉಪಯುಕ್ತ ವಾದ ಯೋಜನೆ. ನಾನು ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಹಾಸನ ತಾಲ್ಲೂಕಿನಲ್ಲಿ ಎಷ್ಟು ಸಾಮೂಹಿಕ ನೀರಾವರಿ ಭಾವಿಗಳನ್ನು ತೋಡುವ ಪ್ರಪೋಸಲ್ ಬಂದಿವೆ ? ಪ್ರಪೋಸಲ್ ಯಾವಾಗ ಬಂದಿದೆ, ಎಷ್ಟು ಮಾಡಿದ್ದೀರಿ, ಯಾವ ಯಾವ ಹಂತದಲ್ಲಿ ಅವು ಇವೆ ಎಂಬುದನ್ನು ದಯಮಾಡಿ ತಿಳಿಸಿ ?

ಶ್ರೀ ಬೇಗಾನೆ ರಾಮಯ್ಯ.—ವಿವರಗಳನ್ನು ನಾನು ಒದಗಿಸಿದ್ದೇನೆ. ಸಾಮೂಹಿಕ ನೀರಾವರಿ ಭಾವಿಗಳಿಗೆ ೫೦ ಪರ್ಸೆಂಟ್ ಸಬ್ಸಿಡಿ ಕೊಟ್ಟಿದೆ. ಹಾಸನದ ಬಗ್ಗೆ ಪೂರ್ತಿ ವಿವರ ನನ್ನ ಬಳಿ ಈಗ ಇದೆ. ಬೇಕಾದರೆ ನಾನು ಒದಗಿಸುತ್ತೇನೆ.

ಅಧ್ಯಕ್ಷರು.—ಈಗ ವಿವರ ಬೇಡ. ಬೇಕಾದರೆ ಮಾನ್ಯ ಸದಸ್ಯರು ಬಂದು ನೋಡಿಕೊಳ್ಳಲಿ.

ಶ್ರೀ ಕೆ. ಹೆಚ್. ಹನುಮೇ ಗೌಡ.—ಈ ಯೋಜನೆಗಳಿಗೆ ಕೊಟ್ಟಿದ್ದ ಸಬ್ಸಿಡಿ ಹಣವನ್ನು ಖರ್ಚು ಮಾಡಿಲ್ಲ. ರೈತರಿಗೆ ಅಲ್ಪಾವಧಿ ಸಾಲ ಮತ್ತು ಮಧ್ಯಮಾವಧಿ ಸಾಲಗಳಿಗೆ ಇದನ್ನು ಅಡ್ಜಸ್ಟ್ ಮಾಡಿ ಬಿಟ್ಟಿದ್ದಾರೆ. ಆದ್ದರಿಂದ ಇದರ ಬಗ್ಗೆ ಕೂಲಂಕುಶವಾದ ವರದಿ ತರಿಸಿಕೊಂಡು ಯಾರು ಹೊಣೆಗಾರ ರಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಿ ಮತ್ತು ಇನ್ನು ಮುಂದೆ ಇಂಥ ಉಪಯುಕ್ತ ಯೋಜನೆಯಿಂದ ಕುರಿ ಕೋಳಿ ಸಾಕಾಣಿಕೆ ಮತ್ತು ಸಾಮೂಹಿಕ ಭಾವಿ ಮುಂತಾದ ಕಾರ್ಯಗಳಿಗೆ ಮಾತ್ರ ಖರ್ಚು ಮಾಡುವಂತೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬೇಗಾನೆ ರಾಮಯ್ಯ.—ಇದು ಉತ್ತಮ ಸಲಹೆ. ನಿಜವಾಗಿ ಪರಿಶೀಲನೆ ಮಾಡುತ್ತೇನೆ.

Sanction of Family Benifit Fund Scheme to State Khadi and Village Industries employees.

296. SRI G. K. TAKKED (Parasgad).—Will the Minister for Labour, Small Scale Industries and Wakf be pleased to state.—

whether it is a fact that the proposal sent by the State Khadi and Village Industries Board for sanction of Family Benefit Fund Scheme 1975, has been turned down by the Government ? If so, the reason therefor although the Scheme is intended to provide social security to the employees ?